ವಾರದ ಪತ್ರ

## 'ಕನ್ನಡತಿ' ಶಬ್ದರೂಪವೇ ಸರಿಯಿಲ್ಲ

ಕಲರ್ಸ್ ಕನ್ನಡದ 'ಕನ್ನಡತಿ' ಪ್ರಾರಂಭದಲ್ಲಿ ಕನ್ನಡ ಪದಗಳ ಬಗ್ಗೆ ಬೇಕಾದ ಹಾಗೆ ಮಾಹಿತಿ ನೀಡುವ ಈ ಕನ್ನಡತಿ ಧಾರಾವಾಹಿಯ ಶಬ್ದ ರೂಪವೇ ಸರಿಯಿಲ್ಲ. ಅದರ ಸರಿಯಾದ ಶಬ್ದರೂಪ– ಕನ್ನಡತಿ ಅಲ್ಲ ಕನ್ನಡಿತಿ ಕನ್ನಡ+ ಇತಿ=ಕನ್ನಡಿತಿ ಇತಿ ಅನ್ನುವ ಸ್ತ್ರೀಲಿಂಗ ಪ್ರತ್ಯಯಕ್ಕೆ ಮೂಲವಾದ್ದು ಸಂಸ್ಕೃತದ ಸ್ತ್ರೀ ಶಬ್ದ. ಅದು ಪ್ರಾಕೃತದಲ್ಲಿ ಇತ್ಥೀ ಎಂದಾಗುತ್ತದೆ. ಪ್ರಾಕೃತದ ಇತ್ಥೀ> ಇತ್ತಿ >ಇತಿ>ತಿಎಂದೆಲ್ಲ ರೂಪತಾಳುತ್ತದೆ. ಇವು ಸ್ತ್ರೀವಾಚಕ ತದ್ಧಿತ ಪ್ರತ್ಯಯಗಳು. ಅಗಸಅಗಸಿತಿ, ಬ್ರಾಹ್ಮಣ ಬ್ರಾಹ್ಮಣಿತಿ. ಇತಿ, ಇತ್ತಿ, ಗಿತ್ತಿ, ಇ ಇವೆಲ್ಲ ಸ್ತ್ರೀವಾಚಕ ಪ್ರತ್ಯಯಗಳು ಒಕ್ಕಲಿಗ–ಒಕ್ಕಲಗಿತ್ತಿ ಕನ್ನಡಿಗಿತಿ ಎಂಬ ರೂಪವೂ ಇದೆ. ಆದರೆ ಕನ್ನಡತಿ ಎಂದು ಇಲ್ಲ. ಸ್ತ್ರೀ> ಇತ್ಥೀ(ಪ್ರಾ)> ಇತಿ. ಇನ್ನುಮುಂದಕ್ಕಾದರೂ ಇದನ್ನು ಕನ್ನಡಿತಿ ಎಂದು ಸರಿಪಡಿಸಲಿ.

—ಡಾ. ಆರ್. ಲಕ್ಷ್ಮೀನಾರಾಯಣ

## ಮರಳಿ ಹಾದಿಗೆ ತನ್ನಿ

ಕನ್ನಡತಿ ಧಾರಾವಾಹಿ ದಾರಿ ತಪ್ಪಿ, ಎತ್ತಲೋ ಸಾಗುತ್ತಿದೆ. ನಿರ್ದೇಶಕರು ರೆಸಾರ್ಟ್ ಹಾಗೂ ಅವರು ಪ್ರೀತಿ ಬ್ರೇಕಿಂಗ್ ಪಾರ್ಟಿ ಎಂದು ಹೇಳಿ ಯಾವುದೋ ಸಂಬಂಧ ಹೆಣೆದು ಎಲ್ಲರ ಪ್ರೀತಿಯೂ ನಾಲ್ಕು ಗೋಡೆ ಮಧ್ಯೆ ಹೇಳಲು ಹೋಗಿ, ಕಥೆಯ ಎಳೆಯನ್ನೂ ದಾರಿ ತಪ್ಪಿಸಿ, ನೋಡುಗರನ್ನು ಗೊಂದಲಕ್ಕೆ ತಳ್ಳುತ್ತಿದ್ದಾರೆ. ದಯವಿಟ್ಟು ಮೂಲ ಕಥೆಯನ್ನ ತಿರುಚದೆ ನೇರವಾಗಿ ಕಥೆಗೆ ಒಂದು ತಾರ್ಕಿಕ ಅಂತ್ಯ ಕೊಡಿ. ಒಂದು ಒಳ್ಳೆಯ ಧಾರಾವಾಹಿ ತನ್ನ ಗಟ್ಟಿ ತನವನ್ನು ಮರಳಿ ತನ್ನಿ.

—ನಾಡಿಗ್ ರಾಮಚಂದ್ರ, ಬೆಂಗಳೂರು

## ಪರಿಸರ ದಿನದ ಸೊಗಸು

ಸ್ಟಾರ್ ಸುವರ್ಣದ 'ಸೂಪರ್ ಸ್ಟಾರ್' ಕಾರ್ಯಕ್ರಮದಲ್ಲಿ ವಿಶ್ವ ಪರಿಸರ ದಿನಕ್ಕಾಗಿ ವಿಶೇಷ ಸಂಚಿಕೆ ಪ್ರಸಾರವಾಯಿತು. ಅದರಲ್ಲಿ ಪರಿಸರಕ್ಕೆ ಸಂಬಂಧಪಟ್ಟ ಆಟವನ್ನು ಆಡಿಸಲಾಯಿತು. ಹಾಗೆಯೇ ಕಾರ್ಯಕ್ರಮದ ಕೊನೆಯಲ್ಲಿ ಸ್ಪರ್ಧಿಗಳಿಗೆ ನೆಡಲು ಸಸಿಗಳನ್ನು ಕೊಡಲಾಯಿತು. ಸ್ಪರ್ಧಿಗಳಿಗೆ ಬಹುಮಾನದ ಜೊತೆ ಕನ್ನಡ ಪುಸ್ತಕವನ್ನು ಕೊಡುತ್ತಿರುವುದು ಶ್ಲಾಘನೀಯ ವಿಚಾರ. ಮರೆತು ಹೋದಂತೆ ಆಗಿರುವ ಪುಸ್ತಕ ಓದುವ ಹವ್ಯಾಸವನ್ನು ವೃದ್ಧಿಸುವಂತಿದೆ. ಶಾಲಿನಿಯವರು ನಿರೂಪಣೆಗೆ ಮರಳಿ ಬಂದಿರುವುದು ಖುಷಿ ಕೊಟ್ಟಿತು.

—ಕೆ.ಎಸ್. ಸವಿತ, ಬೆಂಗಳೂರು

## ಗೃಹಬಂಧನದಲ್ಲಿ ಸೂಕ್ತ ತಿರುವು.

ಕೊರೊನಾ ಧಾರಾವಾಹಿ ಚಿತ್ರೀಕರಣದ ತಂಡದವರೂ ಗೃಹಬಂಧನದಲ್ಲಿ ಇಟ್ಟಿದೆ. ಹೀಗಿದ್ದರೂ, ಎಲ್ಲಾ ವೀಕ್ಷಕರ ಮನ ಗೆದ್ದಿರುವ ಕಲರ್ಸ್ ಕನ್ನಡದ 'ಕನ್ನಡತಿ' ಇದೀಗ ವಿಭಿನ್ನ ನಡೆ ಪಡೆದಿದೆ.

ಏಕೊಏನೋಭುವಿ,ವರು, ಹಾಗೂಹರ್ಷಕುಟುಂಬಕ್ಕೆ ಸೀಮಿತವಾಗಿದ್ದ ಧಾರಾವಾಹಿ, ಈ ಲಾಕ್ ಡೌನ್ ನಿಂದಾಗಿಬೆಂಗಳೂರಿನಿಂದ 60 ಕಿ.ಮಿ. ದೂರದ ಗ್ರಾಮದಲ್ಲಿರುವ ವರೂಧಿನಿ ಮೌಸಿ (ವರು ತಾಯಿಯ ಸಹೋದರಿ) ಸೀತಾ ಅಂಟಿ, ಮಕ್ಕಳು ಪೂರ್ವಿ, ಸಿಂಚನ, ರಮೇಶ (ಮನೆಬಿಟ್ಟು ಹೋಗಿದ್ದಾನೆ) ಹಾಗೂ ಮನೆಯ ಯಜಮಾನರ (ಕನ್ನಡ ಉಪನ್ಯಾಸಕ) ವಿಶಿಷ್ಟ ಕುಟುಂಬದ ಕಥೆಯನ್ನು ಕನ್ನಡತಿಹಳೆ ಪ್ರೀತಿ ಹೊಸ ರೀತಿಯಾಗಿ ಗೃಹಬಂಧನದಲ್ಲಿರುವ ನಮ್ಮೆಲ್ಲರನ್ನು ರಂಜಿಸುತ್ತಿದೆ.

ಲಾಕ್ ಡೌನ್ ನಿಂದಾಗಿ ವರು, ಭುವಿ, ಬಿಂದು, ಸೂಚಿ ಹಾಗೂ ಹರ್ಷ ಅವರು ಸೀತಾ ಅಂಟಿಯ ಮನೆಗೆ ವರು ಕರೆದುಕೊಂಡು ಬರುತ್ತಿದ್ದಂತೆ ಸೀತಾ ಅಂಟಿಯ ಕುಟುಂಬದವರೆಲ್ಲರಿಗೆ ಖುಷಿ. ಸೀತಾ ಅಂಟಿಗೆ ಆರೋಗ್ಯ ಸೇತು ಮೂಲಕ ನೋಂದಣಿ ಮಾಡಿದ ಹರ್ಷನಿಗೆ ಖುಷಿಯಿಂದ ನಿನ್ನಿಂದಾಗಿ ಲಸಿಕೆ ಹಾಕಿಸಿಕೊಳ್ಳುವ ಭಾಗ್ಯ ಲಭಿಸಿತು.

—ರಘುನಾಥರಾವ್ ತಾಪ್ಸೆ, ದಾವಣಗೆರೆ

## ಸ್ಮರಣೀಯ ಕಾರ್ಯಕ್ರಮ

ಚಂದನದಲ್ಲಿ ಪ್ರತಿವಾರ ವಾರದ ವ್ಯಕ್ತಿ ಪ್ರಸಾರವಾಗುತ್ತಿದೆ. ಕನ್ನಡ ನಾಡಿನ ಕಲೆ ಸಂಸ್ಕೃತಿ ಬಿಂಬಿಸುವ ಜೊತೆಗೆ ನಾಡಿನ ಲೇಖಕರು, ಸಿನಿಮಾ ನಿರ್ದೇಶಕರು, ಕಲಾವಿದರು, ವಿಜ್ಞಾನಿಗಳನ್ನು ಪರಿಚಯಿಸುತ್ತದೆ. ಈಚೆಗೆ ಕ್ರಿಯಾಶೀಲ ಕವಿ, ಮೇಲ್ಮನೆಯ ಶಾಸಕರಾಗಿದ್ದ ಸಿದ್ದಲಿಂಗಯ್ಯ ಅವರನ್ನು ಸಂದರ್ಶಿಸಲಾಯಿತು.



ತಮ್ಮ ಪ್ರಾರಂಭಿಕ ಸಾಹಿತ್ಯ ಕೃಷಿಯಲ್ಲಿ ಕ್ರಾಂತಿಕಾರಿ ಕವಿತೆಗಳನ್ನು ಬರೆದು ಯುವಕರಲ್ಲಿ ಹೊಸ ಸಂಚಲನವನ್ನು ಮೂಡಿಸಿದರು. ಅವರ ಆತ್ಮಚರಿತ್ರೆ 'ಊರು ಕೇರಿ'ಯಲ್ಲಿ ಅವರು ಒಂದು ಕೊಳಚೆ ಪ್ರದೇಶ ಗುಡಿಸಿಲಿನಲ್ಲಿ ಬೆಳೆದು ಅನುಭವಿಸಿದ ನೋವು ನಲಿವುಗಳ ನೈಜ ಚಿತ್ರ ನೀಡುವ ಕುರಿತು ಎಳೆ ಎಳೆಯಾಗಿ ಬಿಚ್ಚಿಟ್ಟರು. ಅವರ ಒಂದೊಂದು ಮಾತುಗಳು, ವಿವರಗಳು ಮನ ಮೀಡಿದವು. ಶಾಸಕರಾಗಿ ತಾವು ಕೈಕೊಂಡ ಅನೇಕ ಯೋಜನೆಗಳನ್ನು ವಿವರಿಸಿದರು. ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಮಾಡಿದ ಕೆಲಸವೂ ಸ್ಮರಣೀಯ.

—ಕೆ.ಪಿ. ರಾಮಗುಂಡಿ, ಬೈಲಹೊಂಗಲ

## ಅದು 'ಚಹಾ' ಹೇಗೆ ಸಾಧ್ಯ?

ಸ್ಟಾರ್ ಸುವರ್ಣದ 'ಬೊಂಬಾಟ್ ಭೋಜನ'ದಲ್ಲಿ ಡಾ. ಗೌರಿ ಸುಬ್ರಮಣ್ಯ ಅವರು ಹಲವಾರು ಉಪಯುಕ್ತ ಮನೆ ಮದ್ದುಗಳನ್ನು ತಯಾರಿಸುವ ಕ್ರಮವನ್ನು ವೀಕ್ಷಕರಿಗೆ ಸುಲಭವಾಗಿ ವಿವರಿಸಿ ತೋರಿಸುತ್ತಾರೆ. ಅಮೃತ ಬಳ್ಳಿ, ಅಡಿಕೆ ಇತ್ಯಾದಿ ವಸ್ತುಗಳಿಂದ 'ಚಹಾ' ತಯಾರಿಸುವ ಕ್ರಮ ಒಪ್ಪಲಾಗದು. 'ಚಹಾ' ತಯಾರಿಕೆಗೆ ಬೇಕಿರುವುದು ಚಹಾ ಸೊಪ್ಪಿನ ಪುಡಿ; ಅದರ ವೈಜ್ಞಾನಿಕ ಹೆಸರು 'ಕ್ಯಾಮೆಲಿಯ ಸಿನೆಸಿಸ್'. ವೈದ್ಯರು ತಯಾರಿಸುವ ವಿಧಾನವೇನೋ ಚೆನ್ನಾಗಿರಬಹುದು. ನ್ಯ ವಸ್ತುಗಳಿಂದ ತಯಾರಿಸಿದ ವಸ್ತುಗಳಿಗೆ 'ಕಷಾಯ' ಎಂದು ಕರೆಯುವುದೇ ಸೂಕ್ತ ಅಲ್ಲವೇ?

—ರಾಜೀವ್ ಮಾಗಲ್, ಸಕಲೇಶಪುರ

## ವಿವಿಧತೆಯಲ್ಲಿ ಏಕತೆ!

ಕಲರ್ಸ್ ಕನ್ನಡ ಧಾರಾವಾಹಿಗಳ ಸೂತ್ರಧಾರ ಒಬ್ಬನೇ ಇರಬಹುದೇ ಎಂಬ ಅನುಮಾನ ಮೂಡುತ್ತದೆ. ಪುಟ್ಟ ಗೌರಿ/ ಮಂಗಳ ಗೌರಿ ಮದುವೆ, ಗೀತಾ, ಅಗ್ನಿಸಾಕ್ಷಿ, ಲಕ್ಷ್ಮೀಬಾರಮ್ಮಾ, ಹೂಮಳೆ, ಗಿಣಿರಾಮ, ನಮ್ಮನೆ ಯುವರಾಣಿ, ರಾಧಾ ರಮಣ, ನನ್ನರಸಿ ರಾಧೆ... ಇತ್ಯಾದಿ. ಯಾವುದೇ ಧಾರಾವಾಹಿಯನ್ನು ಗಮನಿಸಿದರೂ ಈ ಅನುಮಾನ ಮೂಡುತ್ತದೆ.

ಈ ಧಾರಾವಾಹಿಗಳಲ್ಲಿ ನಾಯಕ–ನಾಯಕಿ ಮದುವೆ ಆಗಿರುತ್ತದೆ. ಅವರು ಗಂಡಹೆಂಡತಿಯ ತರಹ ಇರುತ್ತಾರೆ. ಆದರೆ ಗಂಡ–ಹೆಂಡತಿ ಅಲ್ಲ ಎನ್ನುವಂತೆ ವರ್ತಿಸುತ್ತಾರೆ. ಗಂಡಸರೆಲ್ಲ ಹೆಂಗಸರಂತೆಯೂ, ಹೆಂಗಸರು ಗಂಡಸರಂತೆಯೂ ವರ್ತಿಸುತ್ತಾರೆ! ಧಾರಾವಾಹಿಗಳಲ್ಲಿ ವೈವಿಧ್ಯ ಇದ್ದರೂ ದಾಂಪತ್ಯ ಮತ್ತು ಗಂಡಸು–ಹೆಂಗಸಿನ ವಿಚಾರದಲ್ಲಿ ಮಾತ್ರ ಈ ಏಕತೆ ಇರುವುದನ್ನು ಗಮನಿಸಿದಾಗ ಹೀಗೆನಿಸುತ್ತದೆ.

—ಪಿ.ಜೆ. ರಾಘವೇಂದ್ರ, ಮೈಸೂರು